ರೂಪಾಯಿ ವೈದ್ಯಾಧ್ಯಕ್ಷ ವೇತನ ತೆಗೆದುಕೊಳ್ಳುವವರಿಗೆ ಇಂದಿರಾ ವಿಕಾಸ ಪತ್ರ ತೆಗೆದುಕೊಳ್ಳಿ ಎಂದು ಒತ್ತಾಯ ಮಾಡುತ್ತಿದ್ದಾರೆ ಎಂದು ಹೇಳಿದರು.

ಶ್ರೀ ವೀರಣ್ಣ.—ಮಾನ್ಯ ಶಿವನಂಜಪ್ಪನವರೆ, ಸುಳ್ಳು ಹೇಳಬೇಡಿ. ಈ ನಾಲಿಗೆಗೆ ಮೂಳೆ ಇಲ್ಲ ವೈದ್ಯಾಧ್ಯಕ್ಷವೇತನಕ್ಕೆ ಕೊಡುವ ಹಣವನ್ನು ಇಂದಿರಾ ವಿಕಾಸ ಪತ್ರದಲ್ಲಿ ತೊಡಗಿಸಿಲ್ಲ.

ಶ್ರೀ ಜಿ.ಎಸ್. ಶಿವನಂಜಪ್ಪ —ಶಹಶೀಲ್ದಾರ್, ಬಿ.ಡಿ.ಓ.ಗಳಿಗೆ ಇಂತಿಷ್ಟು ಎಂದು ಗೊತ್ತು ಮಾಡಿದ್ದೀರಿ. ಅವರುಗಳು ಯಾವುದೇ ಲೈಸೆನ್ಸ್ ಕೊಡಬೇಕಾದರೂ ಇಂತಿಷ್ಟು ಇಂದಿರಾ ವಿಕಾಸ ಪತ್ರದಲ್ಲಿ ಹಣ ಹಾಕಬೇಕೆಂದು ಹೇಳುತ್ತಾರೆ. ಇವತ್ತು ಮಾನ್ಯ ಜಾಲಪ್ಪನವರನ್ನು ನಾನು ಶ್ಲಾಘನೆ ಮಾಡಬೇಕಾಗಿದೆ,

ಅಧ್ಯಕ್ಷರು —ತಾವು ಮುಕ್ತಾಯ ಮಾಡಿ ಮೊದಲು ಚನ್ನಾಗಿ ಮಾತನಾಡಿದಿರಿ, ಈಗ ಹಳಿ ತಪ್ಪಿದ್ದಿರಿ.

ಶ್ರೀ ಜಿ.ಎಸ್. ಶಿವನಂಜಪ್ಪ.—ಸ್ವಾಮಿ, ಬಲವಂತದಿಂದ ತೆಗೆದುಕೊಳ್ಳುವುದು ಬೇಡ ಅವರಾಗಿಯೇ ತೆಗೆದುಕೊಳ್ಳುವುದಕ್ಕೆ ಮುಂದೆ ಬಂದರೆ, ಕೊಡಲಿ ನಾನು ಸಾಮಾನ್ಯವಾಗಿ ಅಂಗಡಿಗೆ ಹೋಗುವುದಿಲ್ಲ ಮೊನ್ನೆ ಗುಬ್ಬಿಯಲ್ಲಿ ಒಂದು ಅಂಗಡಿಗೆ ಹೋಗಿದ್ದೆ ಅವನು ಜಾಲಪ್ಪನವರ ಫೋಟೋ ಹಾಕಿಕೊಂಡಿದ್ದ...

ಅಧ್ಯಕ್ಷರು.—ನಿಮ್ಮ ಗಾಡಿ ಹಳಿ ತಪ್ಪುತ್ತಿದೆ.

ಶ್ರೀ ಜಿ.ಎಸ್. ಶಿವನಂಜಪ್ಪ.—ಕೊಳ್ಳುವವರಿಂದಲೂ ಮಾರಾಟ ಮಾಡುವವರಿಂದಲೂ ಕಮೀಷನ್ ವಸೂಲು ಮಾಡುವಂತೆ ಮಾಡಿರುವುದರಿಂದ, ಎರಡಕ್ಕೂ ಆದಾಯ ಬರುತ್ತದೆಂದು ಅಂಗಡಿಯವನು ಹೇಳಿದ. ಇದಕ್ಕಾಗಿ ಮಾನ್ಯ ಜಾಲಪ್ಪನವರಿಗೆ ಶಹಬಾಷಗಿರಿ ಕೊಡಬೇಕಾಗುತ್ತದೆ. ಕಳ್ಳ ದಂಡು ಯಾರಿಟ್ಟಿದ್ದಾರೆ, ಕಳ್ಳತನದಲ್ಲಿ ಯಾರು ಸಂಪಾದನೆ ಮಾಡುತ್ತಾರೆ ಅಂತವರು ಪರ್ಚೇಸ್ ಮಾಡುತ್ತಾರೆ. ಬಡವರು, ಮಾಶಾಸನ ಪಡೆಯುವವರಿಂದ ಮಾಡುವುದು ಸರಿಯಲ್ಲ. ಅಧಿಕಾರಿಗಳು ಕೂಡ ಈ ವಿಚಾರದಲ್ಲಿ ಸಹಕಾರವನ್ನು ಕೊಡಬೇಕು. ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಂಗಿಸುತ್ತೇನೆ.

ಅಧ್ಯಕ್ಷರು.—ಚರ್ಚೆ ಇವತ್ತು ಮುಕ್ತಾಯವಾಯಿತು ಮಳೆ ಮುಂದುವರಿಯುವುದು. ಈಗ ಮಾನ್ಯ ಮುಖ್ಯಮಂತ್ರಿಯವರು ರಷೀದ್ ಸಾವಿನ ಬಗ್ಗೆ ಹೇಳಿಕೆ ಕೊಡುತ್ತಾರೆ.

ಮುಖ್ಯಮಂತ್ರಿಯವರಿಂದ ಹೇಳಿಕೆ

ಕೇರಳದ ವಕೀಲ ಶ್ರೀ ರಷೀದ್‌ರವರ ನಿಘೂಢ ಸಾವಿನ ಬಗ್ಗೆ ಸಿ.ಬಿ.ಐ,ನಿಂದ ತನಿಖೆಯ ಪ್ರಕಟಣೆ

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ. ನಾನು ಈಗ ಹೇಳಿಕೆ ಕೊಡುವುದಕ್ಕೆ ಬಯಸುವುದಿಲ್ಲ. ಸುಮಾರು ೩ ಗಂಟೆಗಳ ಹಿಂದೆ ವಕೀಲ ಸಂಘದವರು ನನ್ನನ್ನು ಭೇಟಿಯಾಗಲಿಕ್ಕೆ ಬಂದಿದ್ದರು. ಅವರ ಪ್ರತಿನಿಧಿಗಳನ್ನು ಭೇಟಿ ಮಾಡಿ ಸುಮಾರು ಮುಕ್ಕಾಲು ಗಂಟೆ ಮಾತನಾಡಿ, ಸರ್ಕಾರದ ವತಿಯಿಂದ ಏನು ಕ್ರಮ ತೆಗೆದುಕೊಂಡಿದ್ದೇವೆಂದು ಅವರಿಗೆ ಮನವರಿಕೆ ಮಾಡಿಕೊಡಲಿಕ್ಕೆ ಪ್ರಯತ್ನ ಮಾಡಿದ್ದೇನೆ ಇದರ ಬಗ್ಗೆ ಸತ್ಯ ಏನು ಎನ್ನುವುದನ್ನು ಹೊರಗಡೆ ತೆಗೆಯಬೇಕು ಇದರಲ್ಲಿ ಯಾವುದನ್ನು ಮುಚ್ಚುತಕ್ಕಂಥ ಪ್ರಶ್ನೆ ಇಲ್ಲ. ಈ ವಿಷಯವನ್ನು ಯಾರು ಕೇಳುವುದಕ್ಕೆ ಮೊದಲೇ ವೈಯಕ್ತಿಕವಾಗಿ ನಾನೇ ಕೇಂದ್ರ ಸರ್ಕಾರದ ಸಿ.ಬಿ.ಐ. ಮುಂಖಾಂತರ ತನಿಖೆ ಮಾಡಿಸಬೇಕೆಂದು ನಿರ್ಧಾರ ತೆಗೆದುಕೊಂಡು ಕೇಂದ್ರದ ಗೃಹ ಮಂತ್ರಿಯವರಿಗೆ ನಿನ್ನೆ ದಿವಸವೇ ಟೆಲೆಕ್ಸ್ ಮುಖಾಂತರ ತಿಳಿಸಿದ್ದೇನೆ. ಪತ್ರ ಕೂಡ ಬರೆದಿದ್ದೇನೆ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಲೇಬೇಕಾಗಿದೆ. ನಮ್ಮ ದೇಶದ ಇತಿಹಾಸದಲ್ಲಿ ಬಹುಶಃ ಒಬ್ಬ ಗೃಹಮಂತ್ರಿಯಮೇಲೆ ಇನ್ಸ್‌ನಿಯೇಷನ್ ಮಾಡಿದ್ದಾರೆ ಆದರೆ, ಇವತ್ತು ಇಲ್ಲಿ

ಬೇರೆ ಸರ್ಕಾರ ಇದ್ದಾಗಲೂ ಈ ವಿಚಾರದಲ್ಲಿ ಕೇಂದ್ರ ಸರ್ಕಾರದ ಸಿ.ಬಿ.ಐ. ಮುಖಾಂತರವೇ ತನಿಖೆ ಮಾಡಿಸಬೇಕೆಂದು ಒಪ್ಪಿದ ಗೃಹ ಮಂತ್ರಿಯ ಉದಾಹರಣೆ ಬೇರೆ ಇಲ್ಲ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಿಮಗೆ ಮೊದಲು ಕೇರಳದವರೇ ಹೇಳಿದ್ದರು...

ಶ್ರೀ ಎಸ್.ಆರ್. ಬೊಮ್ಮಾಯಿ.—ರಾಜ್ಯ ಸರ್ಕಾರ ಒಪ್ಪದೇ ಅವರು ಮಾಡುವುದಕ್ಕಾಗುವುದಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ನಯನಾರ್ ಜೊತೆಯಲ್ಲೂ ನಾನು ಮಾತನಾಡಿದ್ದೇನೆ. ನಾನು ಮಾತನಾಡಿದ ಮೇಲೆಯೇ ಅವರು ಹೇಳಿದುದು. ನಿನ್ನೆ ಬೆಳಿಗ್ಗೆ ಮಾನ್ಯ ಜಾಲಪ್ಪನವರನ್ನು ಹಾಗೂ ಹಿರಿಯ ಅಧಿಕಾರಿಗಳನ್ನು ಕರೆಯಿಸಿ ಈ ವಿಚಾರದಲ್ಲಿ ಅವರ ಜೊತೆ ಚರ್ಚೆ ಮಾಡಿದ್ದೇನೆ ಸತ್ಯ ಏನಂ ಎನ್ನುವುದು ಜನರಿಗೆ ತಿಳಿಯಲಿ. ಕೇಂದ್ರಸರ್ಕಾರದ ಸಿ.ಬಿ.ಐ. ನಿಂದಲೇ ತನಿಖೆ ಮಾಡಿಸಿ ಎಂದು ಹೇಳಿದ್ದಕ್ಕೆ ನಾನು ಅವರನ್ನು ಶ್ಲಾಘಿಸುತ್ತೇನೆ. ವಕೀಲರ ಸಂಘದ ಪ್ರತಿನಿಧಿಗಳು ಬಂದಿದ್ದರು. ೧೦೦-೨೦೦ ಜನ ವಕೀಲರು ಹೊರಗಡೆ ಗೇಟ್ ಹತ್ತಿರ ಬಂದು ಜಸ್ಟೀಸ್ ಕೊಡಿ ಎಂದು ಕೂಗಾಡಿದರು. ಇದರಲ್ಲಿ ಜಸ್ಟೀಸ್ ಕೊಡತಕ್ಕಂಥದ್ದು ನನ್ನ ಕೈಯಲ್ಲಿ ಇಲ್ಲ. ಇದರಲ್ಲಿ ಯಾರು ತಪ್ಪಿತಸ್ಥರು ಎಂದು ತನಿಖೆ ಮುಖಾಂತರ ಕಂಡುಬರುತ್ತದೆ ಅದು ನ್ಯಾಯಾಲಕ್ಕೆ ಹೋಗುತ್ತದೆ. ಅವರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೇವೆ ನಿಜ ಎಂದು ಕಂಡು ಬಂದರೆ ನ್ಯಾಯಾಲಯದಿಂದ ಯಾರಿಗೆ ಯಾವ ತರಹದ ನ್ಯಾಯ ಸಿಕ್ಕುತ್ತದೆ ಅದು ಅದರ ಕೆಲಸ ಈ ವಿಚಾರ ರಿಟ್ ಪಿಟೀಷನ್ ಮುಖಾಂತರ ಹೈಕೋರ್ಟಿನಲ್ಲಿರುವುದರಿಂದ ಈ ವಿಚಾರದಲ್ಲಿ ಇನ್ನೂ ಹೆಚ್ಚಿನ ವಿವರವನ್ನು ವಿವರಣೆಯನ್ನು ನಾನು ಕೊಡಲಿಕ್ಕೆ ಬಯಸುವುದಿಲ್ಲ ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಲಿಕ್ಕೆ ಬಯಸುತ್ತೇನೆ. ಮೇಲು ನೋಟದಲ್ಲಿ ಇದಂ ಯಾವ ರೀತಿ ಕಾಣುತ್ತಿದೆಯೋ ಅದಕ್ಕಿಂತಲೂ ಹೆಚ್ಚು ಇದರಲ್ಲಿ ನಿಗೂಢತೆ ತುಂಬಿದೆ ಎಂದು ಕಾಣುತ್ತಿದೆ. ಈಗ ಆ ನಿಗೂಢತೆಯನ್ನು ಹೊರಗಡೆ ತೆಗೆಯುವುದಕ್ಕೆ ಎಲ್ಲರೂ ಸೇರಿ ಪ್ರಯತ್ನ ಮಾಡೋಣ.

ಅಧ್ಯಕ್ಷರು.—ಈ ವಿಷಯ ಇಲ್ಲಿಗೆ ಮುಂಕ್ತಾಯವಾಯಿತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೆ, ನಾನು ಇಲ್ಲಿ ಈ ವಿಷಯವನ್ನು ಎತ್ತಿದಾಗ ತಾವು ಸಮಿಸ್ತಾರವಾಗಿ ಒಂದು ಸ್ಟೇಟ್‌ಮೆಂಟ್ ಕೊಡಿಸುತ್ತೇನೆ ಎಂದು ಹೇಳಿದಿರಿ.

ಅಧ್ಯಕ್ಷರು.—ಈಗ ಮಾನ್ಯ ಮಂತ್ರಿಗಳು ಏನು ಹೇಳಿದರು, ಅದು ಸ್ಟೇಟ್‌ಮೆಂಟ್ ಅಲ್ಲವೇ ? ಈಗ ವಿಷಯ ಮುಂಕ್ತಾಯವಾಯಿತು. ಸದನವು ಈಗ ಎದ್ದು ನಾಳೆ ಬೆಳಿಗ್ಗೆ ೧೧-೦೦ ಗಂಟೆಗೆ ಸಮಾವೇಶಗೊಳ್ಳುವುದು.

ಸದನವು ಸಂಜೆ ೬ ಗಂಟೆ ೨೩ ನಿಮಿಷಕ್ಕೆ ಮುಂಕ್ತಾಯವಾಗಿ ಪುನಃ ದಿನಾಂಕ ೧ನೇ ಸೆಪ್ಟೆಂಬರ್ ೧೯೮೭ ರಂದು ಮಂಗಳವಾರ ಬೆಳಿಗ್ಗೆ ೧೧-೦೦ ಗಂಟೆಗೆ ಸಮಾವೇಶಗೊಳ್ಳುವುದಾಗಿ ನಿರ್ಧರಿಸತಂ.